**ದಿನಾಂಕಃ 30–08–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟಿ ಸವಾಲುಃ ಶ್ರೀ ಬಿ ಎನ್ ಎಸ್ ಎದುರುದಾರರ ಪರ ವಕೀಲರಿಂದಃ**

1. ನಾನು ಒಟ್ಟು 1 ವರ್ಷ 5 ತಿಂಗಳು 13 ದಿನ ಅನಧೀಕೃತವಾಗಿ ದಿನಾಂಕ 18.03.2006 ರಿಂದ 31.08.2007 ರವರೆಗೆ ನೌಕರಿಗೆ ಗೈರು ಹಾಜರು ಆಗಿದ್ದೇನೆ ಎಂದರೆ ಸರಿಯಲ್ಲ. ನಾನು ರಜೆ ಅರ್ಜಿ ಕೊಟ್ಟು ಆಗ ಗೈರು ಹಾಜರಾಗಿದ್ದೇನೆ. ನಾನು ಆ ರೀತಿ ಗೈರು ಹಾಜರು ಆಗುವುದಕ್ಕೆ ಮೊದಲು ರಜೆ ಅರ್ಜಿ ಸಲ್ಲಿಸಿಲ್ಲ ಮತ್ತು ಯಾವುದೇ ದಾಖಲಾತಿ ಪೂರೈಸಿಲ್ಲ ಎಂದರೆ ಸರಿಯಲ್ಲ. ನಾನು ರಜೆ ಅರ್ಜಿ ಮತ್ತು ದಾಖಲಾತಿ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುದುರದಾರರು ಸಲ್ಲಿಸಿದ್ದ ರಿಟ್ ಅರ್ಜಿ ಚಾಲ್ತಿಯಲ್ಲಿರುವಾಗ ನನಗೆ ಗದಗ ವಿಭಾಗದಲ್ಲಿ ನೌಕರಿಗೆ ಹಾಜರಾಗುವಂತೆ ನ್ಯಾಯಾಲಯ ಮಧ್ಯಂತರ ಪರಿಹಾರ ನೀಡಿತ್ತು ಎಂದರೆ ಹೌದು. ಆ ರೀತಿ ಆದೇಶ ನ್ಯಾಯಾಲಯ ಮಾಡಿದ ಮೇಲೂ ನಾನು ನೌಕರಿಗೆ ಹಾಜರಾಗಲಿಲ್ಲ ಎಂದರೆ ನನ್ನ ಹೆಂಡತಿಗೆ ಆರೋಗ್ಯ ಸರಿ ಇರಲಿಲ್ಲ ಹಾಗೂ ನನ್ನ ಹೆಂಡತಿ ಮಾನಸಿಕ ಆಗಿದ್ದಳು. ಆದ್ದರಿಂದ ನಾನು ಹಾಜರಾಗಲು ಆಗಲಿಲ್ಲ. ನನ್ನ ಹೆಂಡತಿ ಮಾನಸಿಕ ಕಾಯಿಲೆ ಹೊಂದಿದ್ದಳು ಎಂಬ ಬಗ್ಗೆ ನಾನು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ಈ ಮೊದಲು ನನ್ನ ವಿರುದ್ಧ 3 ಇದೇ ರೀತಿಯ ಗೈರು ಹಾಜರು ಪ್ರಕರಣ ಇದ್ದವು ಎಂದರೆ ಸರಿಯಲ್ಲ. ಅದರಲ್ಲಿ ನನಗೆ ಲಘು ದಂಡ ವಿಧಿಸಿ ಬಿಟ್ಟಿದ್ದರು ಎಂದರೆ ಸರಿಯಲ್ಲ. ನಾನು ನೌಕರಿಯಿಂದ ವಜಾ ಆದ ಮೇಲೆ ಬೇರೆ ಕಡೆ ನೌಕರಿ ಮಾಡಿಕೊಂಡು ಜೀವನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ನನ್ನ ಇಬ್ಬರು ಮಕ್ಕಳು ಇದ್ದೇವೆ. ನನ್ನ ಇಬ್ಬರೂ ಮಕ್ಕಳು ದುಡಿದು ಮನೆ ನಿರ್ವಹಣೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಸಹ ದುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯನ್ನು ನನ್ನ ಇಬ್ಬರೂ ಮಕ್ಕಳು ನೋಡಿಕೊಳ್ಳುತ್ತಿದ್ದರು ಮತ್ತು ನಾನು ಉದ್ದೇಶಪೂರ್ವಕವಾಗಿ ನೌಕರಿಗೆ ಗೈರು ಹಾಜರು ಆದೆ ಎಂದರೆ ಸರಿಯಲ್ಲ. ನಾನು ಯಾವುದೇ ಕೆಲಸ ನಿರ್ವಹಿಸದೇ ಇರುವುದರಿಂದ ನಾನು ಹಿಂಬಾಕಿ ವೇತನ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನಗೆ ಪಿಂಚಣಿ ನೀಡಿರುವುದು ಸರಿ ಇದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.